# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ: | 1275 |
| ಸದಸ್ಯರ ಹೆಸರು: | ಶ್ರೀ.ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 30.09.2020 |
| ಉತ್ತರಿಸುವ ಸಚಿವರು: | ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಇಲಾಖೆ |

| ಕ್ರಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ನಾಗಮಂಗಲ – ಮಂಡ್ಯ ಮುಖ್ಯ ರಸ್ತೆಯ ದೇವಲಾಪುರ ಹ್ಯಾಂಡ್ ಪೋಸ್ಟ್ ನಿಂದ ತಾಲ್ಲೂಕಿನ ಗಡಿ (ಬಸರಾಳು) ವರೆಗೆ ರಸ್ತೆ ಕಾಮಗಾರಿ ಪ್ರಾರಂಭವಾಗಿ 02 ವರ್ಷಗಳು ಕಳೆದರೂ ಕಾಮಗಾರಿ ಪೂರ್ಣಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಸದರಿ ಕಾಮಗಾರಿಯ ಅಂದಾಜು ಮೊತ್ತವೆಷ್ಟು ಹಾಗೂ ಅಂದಾಜು ಪ್ರತಿ ಮತ್ತು ಯಾವ ಗುತ್ತಿಗೆದಾರರಿಗೆ ಈ ಕಾಮಗಾರಿ ವಹಿಸಲಾಗಿದೆ (ವಿವರ ನೀಡುವುದು) | ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕು ನಾಗಮಂಗಲ–ಮಂಡ್ಯ ಮುಖ್ಯ ರಸ್ತೆಯ ದೇವಲಾಪುರ ಹ್ಯಾಂಡ್ ಪೋಸ್ಟ್ ನಿಂದ ತಾಲ್ಲೂಕು ಗಡಿ (ಬಸರಾಳು) ವರೆಗಿನ ರಸ್ತೆ ಕಾಮಗಾರಿಯನ್ನು ರೂ.540.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲು ಟೆಂಡರ್ ಮೂಲಕ ಶ್ರೀ ಹೆಚ್.ಡಿ.ರವಿಕುಮಾರ್, ಮೈಸೂರು ಇವರಿಗೆ ವಹಿಸಲಾಗಿದೆ. |
| ಇ | ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿಗಧಿತ ಅವಧಿಯಲ್ಲಿ ಪೂರ್ಣಗೊಳ್ಳದಿರುವ ಕಾಮಗಾರಿಗಳಾವುವು ವಿಳಂಬಕ್ಕೆ ಕಾರಣವೇನು; ಅವಧಿ ವಿಸ್ತರಣೆ ಮಾಡಲು ಸಮಯಾವಕಾಶ ನೀಡಲಾಗಿದೆಯೇ; ನೀಡಿದ್ದಲ್ಲಿ ಆದೇಶ ಪ್ರತಿ ನೀಡುವುದು; | ನಾಗಮಂಗಲ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕಶೀರ್ಷಿಕೆಯಡಿ 7 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಹಾಗೂ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಹಂತ–4ರ ಪ್ಯಾಕೇಜ್ 329ರಡಿ ಒಟ್ಟು 3 ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿರುತ್ತದೆ. ಕೋವಿಡ್–19ರ ಹಿನ್ನೆಲೆಯಲ್ಲಿ ಹಾಗೂ ಇನ್ನಿತರೆ ಕಾರಣಗಳಿಂದ ಕಾಮಗಾರಿಗಳು ನಿಗದಿತ ಅವಧಿಯಲ್ಲಿ ಪೂರ್ಣಗೊಳ್ಳದೆ ಪ್ರಗತಿಯಲ್ಲಿರುತ್ತವೆ. ವಿಳಂಬದ ಅವಧಿಗೆ ನಿಯಮಾನುಸಾರ ಕಾಲಾವಧಿ ವಿಸ್ತರಣೆ ನೀಡಲಾಗುವುದು. ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಈ | ಈ ಸಂಬಂಧ ಇಲಾಖಾ ಕಾರ್ಯಪಾಲಕ ಇಂಜಿನಿಯರ್, ನಾಗಮಂಗಲ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಗುತ್ತಿಗೆದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ಮಾಹಿತಿ ನೀಡುವುದು) | ಕಾಮಗಾರಿ ಸ್ಥಳ ಹಸ್ತಾಂತರಗೊಳ್ಳುವಲ್ಲಿ ವಿಳಂಭ, ಕೋವಿಡ್–19ರ ಲಾಕ್‌ಡೌನ್ ಪರಿಣಾಮದಿಂದಾಗಿ ಕಾಮಗಾರಿಗಳು ವಿಳಂಭವಾಗಿದ್ದು, ನಿಯಮಾನುಸಾರ ಕಾಲಾವಧಿ ವಿಸ್ತರಣೆ ಮಾಡಬೇಕಾಗಿರುತ್ತದೆ. ಗುತ್ತಿಗೆದಾರರು ವಿಸ್ತರಿತ ಕಾಲಾವಧಿಯಲ್ಲಿಯೂ ಕಾಮಗಾರಿ ಪೂರ್ಣಗೊಳಿಸದಿದ್ದಲ್ಲಿ ಗುತ್ತಿಗೆ ಕರಾರಿನಂತೆ ಸದರಿ ಗುತ್ತಿಗೆದಾರರ ವಿರುದ್ಧ ಕ್ರಮ ಜರುಗಿಸಲಾಗುವುದು. |

ಲೋಇ 85 ಸಿಕ್ಯೂಎನ್ 2020(ಇ)

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ
ಮತ್ತು ಸಮಾಜ ಕಲ್ಯಾಣ ಇಲಾಖೆ

ಅನುಬಂಧ

| ಶ್ರೀ.ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ರವರು ಮಂಡಿಸಿರುವ ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ:1015(1275) ಅನುಬಂಧ | | | | | | |
|---|---|---|---|---|---|---|
| ಕ್ರ ಸಂ | ತಾಲ್ಲೂಕು | ಕಾಮಗಾರಿಯ ಹೆಸರು/ ಇಂಡೆಂಟ್ ಸಂಖ್ಯೆ | ಅಂದಾಜು ಮೊತ್ತ | ಕಾಮಗಾರಿಯು ಹಸ್ತಾಂತರಗೊಂಡು ಪ್ರಾರಂಭವಾದ ದಿನಾಂಕ | ಕಾಮಗಾರಿಯು ಪೂರ್ಣವಾಗಬೇಕಾದ ದಿನಾಂಕ | ಷರಾ |
| 1 | 2 | 3 | 4 | 5 | 6 | 7 |
| | | ಮುಂದುವರೆದ ಕಾಮಗಾರಿಗಳು | | | | |
| 1 | ನಾಗಮಂಗಲ | ನಾಗಮಂಗಲ ತಾ. ನಾಗಮಂಗಲ – ಶ್ರವಣಬೆಳಗೊಳ ರಸ್ತೆಯ ಸರಪಳಿ 10.25 ರಿಂದ 14.75 ಕಿ.ಮೀವರೆಗೆ ರಸ್ತೆ ಅಭಿವೃದ್ಧಿ | 450.00 | 08-01-2020 | 07-07-2020 | ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕಾಮಗಾರಿ ವಿಳಂಬಕ್ಕೆ ಗುತ್ತಿಗೆದಾರರಿಗೆ ವಿಭಾಗ ಕಛೇರಿಯ ಪತ್ರ ಸಂ:1071-72 ದಿನಾಂಕ:-23-03-2020, 222-23 ದಿನಾಂಕ;-17-08-2020 ರಲ್ಲಿ ನೋಟೀಸ್ ನೀಡಲಾಗಿರುತ್ತದೆ. ಈ ವಿಳಂಬದ ಅವಧಿಗೆ ನಿಯಮಾನುಸಾರ ಕಾಲಾವಧಿ ವಿಸ್ತರಣೆ ನೀಡಲಾಗುವುದು |
| 2 | ನಾಗಮಂಗಲ | ನಾಗಮಂಗಲ ತಾ. ನಾಗಮಂಗಲ – ಶ್ರವಣಬೆಳಗೊಳ ರಸ್ತೆಯ ಸರಪಳಿ 14.75 ರಿಂದ 19.60 ಕಿ.ಮೀವರೆಗೆ ರಸ್ತೆ ಅಭಿವೃದ್ಧಿ | 450.00 | | | |
| 3 | ನಾಗಮಂಗಲ | ನಾಗಮಂಗಲ ತಾ. ನಾಗಮಂಗಲ – ಶ್ರವಣಬೆಳಗೊಳ ರಸ್ತೆಯ ಸ. 19.60 ರಿಂದ 22.40 ಕಿ.ಮೀವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ | 200.00 | | | |
| 4 | ನಾಗಮಂಗಲ | 1) ನಾಗಮಂಗಲ ತಾಲ್ಲೋಕು ಕೋಳಾಲ, ತುರುವೇಕೆರೆ, ದಬ್ಬೆಘಟ್ಟ, ಚಾಮಲಾಪುರ, ಅದ್ದಿಹಳ್ಳಿ, ಕಾಂತಾಪುರ ಮಾರ್ಗ ರಾಜ್ಯಹೆದ್ದಾರಿ 19 (ಎನ್.ಹೆಚ್-150ಎ) ಅನ್ನು ಹೊಣಕೆರೆ ಬಳಿ ಸೇರುವ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ: 1.00 ರಿಂದ 5.50 ಕಿ.ಮೀ. ವರೆಗೆ ರಸ್ತೆ ಅಬಿವೃದ್ಧಿ ಕಾಮಗಾರಿ & 2) ನಾಗಮಂಗಲ ತಾಲ್ಲೋಕು ದೇವಲಾಪುರ ಮಾರ್ಕೋನಹಳ್ಳಿ ಸೇರುವ ಜಿಲ್ಲಾ ಮುಖ್ಯ ರಸ್ತೆಯ ಸರಪಳಿ 1.40 ರಿಂದ 5.00 ಕಿ.ಮೀ. ವರೆಗೆ ರಸ್ತೆ ಅಬಿವೃದ್ಧಿ ಕಾಮಗಾರಿ | 750.00 | 10-08-2020 | 09-02-2021 | ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕೋವಿಡ್-19 ರ ಹಿನ್ನಲೆಯಲ್ಲಿ ಕಾಮಗಾರಿ ವಿಳಂಬವಾಗಿರುತ್ತದೆ. ಈ ವಿಳಂಬದ ಅವಧಿಗೆ ನಿಯಮಾನುಸಾರ ಕಾಲಾವಧಿ ವಿಸ್ತರಣೆ ನೀಡಲಾಗುವುದು |

| 1 | 2 | 3 | 4 | 5 | 6 | 7 |
|---|---|---|---|---|---|---|
| 7 | | ನಾಗಮಂಗಲ ತಾ, ಹೊನ್ನಹಳ್ಳಿ ಗ್ರಾಮ ಪರಿಮಿತಿಯಲ್ಲಿ, ನಾಗಮಂಗಲ - ಕೆ.ಆರ್. ಪೇಟೆ ಮುಖ್ಯ ರಸ್ತೆಯಿಂದ ಕಾರಹಳ್ಳಿ, ಬೆಣಚಕಲ್ಲುಕೊಪ್ಪಲು ರಸ್ತೆಯಿಂದ ಟಿ.ಚನ್ನಾಪುರ, ಬ್ರಹ್ಮದೇವರಹಳ್ಳಿ - ಬಸರಾಳು ರಸ್ತೆಯಿಂದ ಅರೆಅಲ್ಲಹಳ್ಳಿ, ತೆಂಗಿನಭಾಗದಿಂದ ಕಳ್ಳಿಕೊಪ್ಪಲು ರಸ್ತೆಗಳ ಅಭಿವೃದ್ಧಿ ಕಾಮಗಾರಿ (ಒಂದು ಬಾರಿ ಅಭಿವೃದ್ಧಿ) | 95.00 | 10-09-2020 | 09-03-2021 | ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಕಾಮಗಾರು ರಸ್ತೆಯಲ್ಲಿನ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಬೇಕಾಗಿದ್ದು, ರಸ್ತೆಯ ಪಕ್ಕದಲ್ಲಿನ ಮರಗಳನ್ನು ತೆರವುಗೊಳಿಸಬೇಕಾಗಿರುವುದರಿಂದ ಕಾಮಗಾರಿ ವಿಳಂಬವಾಗಿರುತ್ತದೆ. ಈ ವಿಳಂಬದ ಅವಧಿಗೆ ನಿಯಮಾನುಸಾರ ಕಾಲಾವಧಿ ವಿಸ್ತರಣೆ ನೀಡಲಾಗುವುದು. |

ಮುಖ್ಯ ಇಂಜಿನಿಯರ್ ಪ್ರ.ವಾ.
ಲೋ.ಬಂ. ಮತ್ತು ಒ.ಜ.ಸಾ. ಇಲಾಖೆ
ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ),
ಬೆಂಗಳೂರು-560 001

# ಯೋಜನಾ ಅನುಷ್ಠಾನ ಘಟಕ – ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ

ಅನುಬಂಧ –

| ಪ್ಯಾಕೇಜ್ ಸಂ | | ಕಾಮಗಾರಿಯ ಹೆಸರು | ರಸ್ತೆಯ ವರ್ಗ | ಗುತ್ತಿಗೆದಾರರು | ಉದ್ದೇಶಿತ ರಸ್ತೆಯ ಉದ್ದ | ಗುತ್ತಿಗೆ ಮೊತ್ತ (ರೂ. ಲಕ್ಷಗಳಲ್ಲಿ) | ಗುತ್ತಿಗೆ ಅವಧಿ | | ಷರಾ |
|---|---|---|---|---|---|---|---|---|---|
| | | | | | | | ಪ್ರಾರಂಭ | ಮುಕ್ತಾಯ | |
| 329 | ಎ | ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು ಮತ್ತು ನಾಗಮಂಗಲ ತಾಲ್ಲೂಕು ವ್ಯಾಪ್ತಿಗೆ ಬರುವ ಮಂಡ್ಯ ನಾಗಮಂಗಲ ರಸ್ತೆ (ಜಿಲ್ಲಾ ಮುಖ್ಯ ರಸ್ತೆ) ಸರಪಳಿ 0.00 ಕಿ.ಮೀ ರಿಂದ 36.00 ಕಿ.ಮೀ (ಆಯ್ದ ಭಾಗಗಳು) ವರೆಗೆ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ | ಜಿ.ಮುರ | ಶ್ರೀ ಹೆಚ್. ಬಿ. ರವಿಕುಮಾರ್ #20 ಅಮ್ಮ 7 ನೇ ಮುಖ್ಯ ರಸ್ತೆ ಡಿ ಬ್ಲಾಕ್ ವಿಜಯನಗರ 3 ನೇ ಹಂತ ಮೈಸೂರು | 16.830 | 3490.67 | 12-07-2019 | 11-06-2020 | |
| | ಬಿ | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ವ್ಯಾಪ್ತಿಗೆ ಬರುವ ಕೋಲಾಳ–ತುರುವೆಕೆರೆ–ವಡ್ಡೆಘಟ್ಟ (ಜಿಲ್ಲಾ ಮುಖ್ಯರಸ್ತೆ) ಸರಪಳಿ 0.0 ಕಿ.ಮೀ ರಿಂದ 54.0 ಕಿ.ಮೀವರೆಗೆ (ಆಯ್ದ ಭಾಗಗಳು)ವರೆಗೆ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ | ಜಿ.ಮುರ | | 14.425 | | | | |
| | ಸಿ | ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು ವ್ಯಾಪ್ತಿಗೆ ಬರುವ ಬೆಳ್ಳೂರು ಹೊನ್ನೇನಹಳ್ಳಿ (ಜಿಲ್ಲಾ ಮುಖ್ಯರಸ್ತೆ) ಸರಪಳಿ 0.00 ಕಿ.ಮೀ ರಿಂದ 10.73 ಕಿ.ಮೀ ವರೆಗೆ (ಆಯ್ದ ಭಾಗಗಳು) ವರೆಗೆ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿ | ಜಿ.ಮುರ | | 5.000 | | | | |
| | | ಒಟ್ಟು = | | | **36.26** | **3490.67** | | | |

ಮುಖ್ಯ ಇಂಜಿನಿಯರ್
ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ,
ಯೋಜನಾ ಅನುಷ್ಠಾನ ಘಟಕ,
ಕೆ.ಆರ್.ವೃತ್ತ, ಬೆಂಗಳೂರು